**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 39/2012**

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಸತೀಶ ಮತ್ತು ಇತರರು**

**ಚಾಸಾ:08/**ಪ್ರಾಸಾ:10

| | |
|---|---|
| ಹೆಸರು | **ಶಿವಕುಮಾರ್** |
| ತಂದೆಯ ಹೆಸರು | **ಗಾಳಿಗೋಪರಯ್ಯ** |
| ವಯಸ್ಸು | **47** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ನೆಲಮಂಗಲ** |

**ದಿನಾಂಕಃ 06-12-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ಚಾಸಾ-5ರವರು ನನಗೆ ಗೊತ್ತು, ಆರೋಪಿತರು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಘಟನೆಯನ್ನು ಕಣ್ಣಾರೆ ಕಂಡಿರುವುದಿಲ್ಲ,ಘಟನೆ ಸಂಬಂಧ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ, ಇದನ್ನು ಹೊರತು ಪಡಿಸಿ ಪ್ರಕರಣದ ಬಗ್ಗೆ ನನಗೇನೂ ಮಾಹಿತಿ ಇಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ,** ಪಾಟೀ **ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ,** ಪಾಟೀ **ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕಃ 09.07.2011ರಂದು ನಾನು ಗ್ರಾಮದಲ್ಲಿ ಇದ್ದೇನು, ಮಧ್ಯಾಹ್ನ ಬೆಂಗಳೂರಿನಲ್ಲಿರುವ 1ನೇ ಆರೋಪಿಯು ಒಂದು ಕಾರಿನಲ್ಲಿ ಊರಿಗೆ ಬಂದರು ಎಂದರೆ ಸರಿಯಲ್ಲ. ಕಾರನ್ನು ಊರಿನ ಮುಂದೆ ನಿಲ್ಲಿಸಿದರು ಅದರಲ್ಲಿದ್ದ ಇಬ್ಬರೂ ಇಳಿದು ಹೋದರು ಎಂದರೆ ಸರಿಯಲ್ಲ. 1ನೇ ಆರೋಪಿಯ ಜೊತೆಯಲ್ಲಿ ಇಬ್ಬರೂ ಹುಡುಗರು ಬಂದಿದ್ದರು, ಕಾರಿನಿಂದ ಇಳಿದು ಹೋದವರು ಯಾರು ಎಂದು ಕೇಳಿದಾಗ ಯಾರೋ ಗೊತಿತಲ್ಲ ಅಣ್ಣ, ಬರುತ್ತಿರುವಾಗ ಕಾರು ನಿಲ್ಲಿಸಿದರು, ನಿಲ್ಲಿಸಿ ಕೇಳಿಂದಾಗ ಜಾತ್ರೆಗೆ ಬರುವುದಾಗಿ ತಿಳಿಸಿದರು, ಬಿಸಿಲು ಇದ್ದಿದುದರಿಂದ ಅವರನ್ನು ಅತ್ತಿಸಿಕೊಂಡೆನು ಎಂದು ಹೇಳಿದನು ಎಂದರೆಪಿ ಸರಿಯಲ್ಲ. ನಾನು ಅಲ್ಲಿ ಇರುವಾ ಗ ಸಂಜೆ 5.30 ಗಂಟೆಯ ಸಮಯದಲ್ಲಿ ಊರಿನಲ್ಲಿ ದೇವರ ಉತ್ಸವ ನಡೆಯುತ್ತಿತ್ತು, ನಾವು ಚಾಸಾ-1ರವರ ಮನೆಯ ಬಳಿ ಇರುವಾಗ ಅಲ್ಲಿ ಜನರು ಸೇರಿದ್ದರು, ನಾವು ಅಲ್ಲಿಗೆ ಹೋದೇವು ಎಂದರೆ ಸರಿಯಲ್ಲ. ಅಲ್ಲಿ 1ನೇ ಆರೋಪಿ ಹಾಗೂ ಚಾಸಾ-1ರವರಿಗೂ ಗಲಾಟೆ ನಡೆಯುತ್ತಿದ್ದು, 1ನೇ ಆರೋಪಿಯು ಅಲ್ಲಿ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1ರವರಿಗೆ ದೊಣ್ಣೆಯಿಂದ ಹೊಡೆದನು ಎಂದರೆ ಸರಿಯಲ್ಲ. ಚಾಸಾ-1ರವರು ಸಹ ದೊಣ್ಣೆಯಿಂದ 1ನೇ ಆರೋಪಿಯ ತಲೆಗೆ, ಮೈ ಕೈ ಗೆ ಹೊಡೆದರು ಎಂದರೆ ಸರಿಯಲ್ಲ. ಆಗ 1ನೇ ಆರೋಪಿಯ ಜೊತೆಯಲ್ಲಿ ಬಂದಿದ್ದವರು ಅಲ್ಲಿ ಬಿದ್ದಿದದ್ದ ದೊಣ್ಣೆಗಳನ್ನು ತೆಗೆದುಕೊಂಡು ಚಾಸಾ-1ರವರಿಗೆ ಹೊಡೆಯಲು ಹೋದರು, ಆಗ ಚಾಸಾ-1ರವರು ತಪ್ಪಿಸಿಕೊಂಡು ಮನೆಯ ಒಳಗೆ ಓಡಿ ಹೋದರು ಬಿಡದೇ, 1ನೇ ಆರೋಪಿ ಮತ್ತು ಅವರ ಜೊತೆಯಲ್ಲಿ ಬಂದಿದ್ದ ಇಬ್ಬರೂ ಚಾಸಾ-1ರವರ ಮನೆಗೆ ನುಗ್ಗಿ ಚಾಸಾ-1ರವರನ್ನು ಈಚೆಗೆ ಎಳೆದುಕೊಂಡು ಬಂದು ಹೊಡೆದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲಿದ್ದ ಚಾಸಾ-1ರವರ ಅಣ್ಣ ಚಾಸಾ-2,4, 5 ಮತ್ತು ಚಂದ್ರಪ್ಪ ಮತ್ತು ಇತರರು ಬಿಡಿಸಿದಾಗ 1ನೇ ಆರೋಪಿ ಮತ್ತು ಅವರ ಜೊತೆಯಲ್ಲಿದ್ದ ಇಬ್ಬರೂ ಸೇರಿಕೊಂಡು ಚಾಸಾ-1ರವರಕಾರಿನ ಗ್ಲಾಸ್ ಗಳನ್ನು ಹೊಡೆದು ಹಾಕಿ ಜಖಂ ಮಾಡಿದರು ಎಂದರೆ ಸರಿಯಲ್ಲ. ಇದರಿಂದ ಚಾಸಾ-1ರವರಿಗೆ ಸುಮಾರು ರೂ. 10,000/- ಹಣ ನಷ್ಟವಾಗಿರುತ್ತದೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಜನರು ಬಂದು ಗ್ರಾಮದಲ್ಲಿ ಜಾತ್ರೆ ನಡೆಯುತ್ತಿದ್ದು ಗಲಾಟೆ ಗಳಾಬಾರದು ಎಂದು ಅವರನ್ನು ಬಿಡಿಸಿದರು ಎಂದರೆ ಸರಿಯಲ್ಲ. ಜನವರು ಹೆಚ್ಚು ಸೇರುತ್ತಿದ್ದದನ್ನು ಕಂಡು 1ನೇ ಆರೋಪಿ ಮತ್ತು ಅವರ ಜೊತೆಯಲ್ಲಿ ಬಂದಿದ್ದ ಇಬ್ಬರೂ ಅಲ್ಲಿಂದ ತಪ್ಪಿಸಿಕೊಂಡು ಹೋದರು

ಎಂದರೆ ಸರಿಯಲ್ಲ. 1ನೇ ಆರೋಪಿ ಮತ್ತು ಚಾಸಾ-1ರವರಿಗೆ ಏಟು ಗಳು ಆಗಿದ್ದು ಚಾಸಾ-1ರವರು 108 ಆಂಬ್ಯುಲೆನ್ಸ್ ನಲ್ಲಿ ಆಸ್ಪತ್ರೆಗೆ ಎಂದು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1ನೇ ಆರೋಪಿಯ ತಂದೆ ಹೊನ್ನಪ್ಪ ಮತ್ತು ಅವರ ಮಕ್ಕಳು ಬಂದಿರಲಿಲ್ಲ ನನಗೆ ಗೊತ್ತಿಲ್ಲ.

ಸದರಿ ಘಟನೆಯ ಬಗ್ಗೆ ತನಿಖಾಧಿಕಾರಿಯ ಮುಂದೆ ದಿನಾಂಕಃ 28-07-2011 ರಂದು ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆಂದು....... ಸಹಿ ಮಾಡಿರುತ್ತೇನೆಂದು ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು.

ನಿಪಿ-15ರಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ **ಸವಾಲು** :- **ಶ್ರೀ. ಎಂ.ಎಸ್.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ:-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ.**
**ಮಾಗಡಿ.**

**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 620 / 2021**

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಬಸವರಾಜು ಮತ್ತು ಇತರರು**

**ಚಾಸಾ:03/**ಪ್ರಾಸಾ:0**6**

| | |
|---|---|
| ಹೆಸರು | **ಮಹೇಶ** |
| ತಂದೆಯ / ಗಂಡನ ಹೆಸರು | **ಪುಟ್ಟಸ್ವಾಮಯ್ಯ** |
| ವಯಸ್ಸು | **27** |
| ಉದ್ಯೋಗ | **ವ್ಯಾಪಾರಿ** |
| ವಿಳಾಸ | **ದೊಡ್ಡಸೋಮನಹಳ್ಳಿ** |

**ದಿನಾಂಕಃ 26-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ನಾನು ಗಲಾಟೆಯಾದಗ ಇರುವುದಿಲ್ಲ ಆದರೆ ಮಹಜರ್ ಮಾಡಲು ಬಂದಾಗ ಸಹಿ ಮಾಡಿರುತ್ತೇನೆ. ಸುಮಾರು 5 ವರ್ಷಗಳ ಹಿಂದೆ ನಾನು, ಚಾಸಾ-1 ಮತ್ತು 2 ರವರು ಮಹಜರಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಾಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ,** ಪಾಟೀ **ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ,** ಪಾಟೀ **ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿಃ 11-07-2020 ಪೋಲಿಸರು ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಘಟನ ಸ್ಥಳದಲ್ಲಿ ಪೋಲಿಸರು ಮಹಜರ್ ಕ್ರಮ ಅನುಸರಿಸಿ ಅಲ್ಲಿ ಒಂದು ಯಲಗುದಲಿಯನ್ನು ಅಮಾನತು ಪಡಿಸಿಕೊಂಡಿರುತ್ತಾರೆಂದರೆ ಸಾಕ್ಷಿ ನಾನು ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ **ಸವಾಲು** :- **ಶ್ರೀ. ಎಂಎಸ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ:-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ.**
**ಮಾಗಡಿ.**

**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 5573 / 2023**

ಫಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ರಮೇಶ ಮತ್ತು ಇತರರು**

**ಚಾಸಾ:03/**ಪ್ರಾಸಾ:01

| | |
|---|---|
| ಹೆಸರು | **ಭೈರವೇಶ್ವರ** |
| ತಂದೆಯ ಹೆಸರು | **ಮಲ್ಲೇಶ** |
| ವಯಸ್ಸು | **38** |
| ಉದ್ಯೋಗ | **ಹೋಟೇಲ್** |
| ವಿಳಾಸ | **ಚೇಳೂರು** |

**ದಿನಾಂಕಃ 27-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಪೋಲಿಸರು ನಮ್ಮಗಳ ಸಮಕ್ಷಮ ಯಾವುದೇ ಮಹಜರ್ ಕ್ರಮ ಅನುಸರಿಸಿರುವುದಿಲ್ಲ, ಇದನ್ನು ಹೊರತು ಪಡಿಸಿ ಪ್ರಕರಣದ ಬಗ್ಗೆ ನನಗೇನೂ ಮಾಹಿತಿ ಇಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ನಿಪಿ-1 ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಸಹಿಯನ್ನು ಮಾಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ,** ಪಾಟೀ **ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ**

**ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ,** ಪಾಟೀ **ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕಃ 28-07-2023 ರಂದು ಪೋಲಿಸರು ದೂರಿನ ಆಧಾರದ ಮೇಲೆ ಕೃತ್ಯ ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿ ಸ್ಥಳವನ್ನು ನಾನು ತೋರಿಸಿದ್ದು, ಪೋಲಿಸರು ನಾನು ತೋರಿಸಿದ ಜಾಗದಲ್ಲಿ ಸಂಜೆ 4.35 ರಿಂದ 5.15 ರವರೆಗೆ ನನ್ನ, ಚಾಸಾ-1 ಮತ್ತು 2 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರುಗಳೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ **ಸವಾಲು** :- **ಶ್ರೀ. ಎ.ಕೆ.ಹೆಚ್.** ವಕೀಲರಿಂದ **ಆರೋಪಿಗಳ** ಪರವಾಗಿ:-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ.**
**ಮಾಗಡಿ.**